ರಾಜ್ಯದಲ್ಲಿ ತಾಲ್ಲೂಕು ಪಂಚಾಯತ್ ನಿಧಿ.

1626- ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ತಾಲ್ಲೂಕು ಪಂಚಾಯಿತಿ ನಿಧಿಯನ್ನು ಪ್ರಾರಂಭಿಸಲಾಗಿದೆಯೇ?*

ಆ) *ಪ್ರಾರಂಭಿಸಲಾಗಿದ್ದಲ್ಲಿ ಅದನ್ನು ಯಾವ ಯಾವ ಕೆಲಸಕ್ಕೆ ಉಪಯೋಗಿಸಲಾಗುವುದು (ವಿವರ ನೀಡುವುದು)*

ಇ) *ಪ್ರಾರಂಭಿಸಲಾಗಿದಿದ್ದಲ್ಲಿ ಕಾರಣಗಳೇನು?*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಹೌದು.

ಆ) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 93ರ ಪ್ರಕರಣ 145ರಲ್ಲಿ ಸರ್ಕಾರವು ತಾಲ್ಲೂಕು ಪಂಚಾಯತಿಗಳಿಗೆ ಅನುಸೂಜಿ 2ರಲ್ಲಿ ನಿರ್ದಿಷ್ಟಪಡಿಸಿರುವ ಕೃಷಿ ಭೂ ಸುಧಾರಣೆ ಮತ್ತು ಭೂಸಂರಕ್ಷಣೆ, ಸಣ್ಣ ನೀರಾವರಿ, ಜಲನಿರ್ವಹಣೆ ಮತ್ತು ಜಲಾನಯನ ಅಭಿವೃದ್ಧಿ ಪಶುಸಂಗೋಪನೆ, ಹೈನುಗಾರಿಕೆ ಮತ್ತು ಕೋಳಿ ಸಾಕಣೆ, ಮೀನುಗಾರಿಕೆ ಗ್ರಾಮ ಮತ್ತು ಗುಡಿ ಕೈಗಾರಿಕೆಗಳು ಗ್ರಾಮೀಣಾ ಗೃಹನಿರ್ಮಾಣ, ಕುಡಿಯುವ ನೀರು ಸಾಮಾಜಿಕ ಮತ್ತು ಹೊಲಗದ್ದೆ ಅರಣ್ಯ ನಿರ್ಮಾಣ ಸಣ್ಣ ಅರಣ್ಯೋತ್ಪನ್ನಗಳು, ರಸ್ತೆಗಳು, ಕಟ್ಟಡಗಳು, ಅಡಿಗಾಲುವೆಗಳು, ಹಾಯ್ಗಡ, ಜಲಮಾರ್ಗಗಳು, ಮತ್ತು ಇತರ ಸಂಪರ್ಕ ಸಾಧನಗಳು, ಸಾಂಪ್ರದಾಯಿಕವಲ್ಲದ ಶಕ್ತಿಮೂಲ, ಬಡತನ ನಿವಾರಣೆ ಕಾರ್ಯಕ್ರಮಗಳು, ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ, ತಾಂತ್ರಿಕ ತರಬೇತಿ ಮತ್ತು ವೃತ್ತಿ ಶಿಕ್ಷಣ ವಯಸ್ಕರ ಮತ್ತು ಅನೌಪಚಾರಿಕ ಶಿಕ್ಷಣ, ಮಾರುಕಟ್ಟೆಗಳು, ಜಾತ್ರೆಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಅಂಗವಿಕಲರು ಮತ್ತು ಮಾನಸಿಕ ಅಸ್ವಸ್ಥ ವ್ಯಕ್ತಿಗಳ ಕಲ್ಯಾಣ, ದುರ್ಬಲ ವರ್ಗಗಳ ಕಲ್ಯಾಣ, ಸಮುದಾಯ ಸ್ವತ್ತುಗಳ ನಿರ್ವಹಣೆ ಸಹಕಾರ ಇತ್ಯಾದಿ ಪ್ರಕಾರ್ಯಗಳಿಗೆ ಹಾಗೂ ಕೇಂದ್ರಸರ್ಕಾರವು 10 ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಹಣ ಬಿಡುಗಡೆ ಮಾಡಿದ್ದು ಅನುದಾನ ಮತ್ತು ಹೆಚ್ಚುವರಿ ಸ್ಟಾಂಪ್ ಶುಲ್ಕದ ಅನುದಾನಗಳನ್ನು ಉಪಯೋಗಿಸುತ್ತವೆ.

ಇ) ಉದ್ಭವಿಸುವುದಿಲ್ಲ.

ವಿಜಾಪುರ ತಾಲ್ಲೂಕಿನ ನಿರೋಣಿ ಗ್ರಾಮಕ್ಕೆ ವಿಶ್ವ ಆಹಾರ ಯೋಜನೆ.

1628 - ಶ್ರೀ ಶಿವಾನಂದ ಪಾಟೀಲ್ (ತ್ರಿಕೋಟ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಿಜಾಪುರ ತಾಲ್ಲೂಕಿನ ನಿರೋಣಿ ಗ್ರಾಮಕ್ಕೆ 'ವಿಶ್ವ ಆಹಾರ ಯೋಜನೆ' ಅಡಿಯಲ್ಲಿ ಶ್ರೀ ಚನ್ನವೀರೇಶ್ವರ ಮಾಧ್ಯಮಿಕ ಶಾಲೆ ಇದರ ಕಟ್ಟಡದ ಸಲುವಾಗಿ ಅನುದಾನ*